## ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 150 ಶಿವಾನೀ 2009

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ: 19-08-2009.

## ಸುತ್ತೋಲೆ

**ವಿಷಯ:-** ಸರ್ಕಾರಿ ವಾಹನಗಳನ್ನು ಅಧಿಕೃತ ಕೆಲಸಕಾರ್ಯಗಳಿಗೆ ಮಾತ್ರ ಉಪಯೋಗಿಸುವ ಬಗ್ಗೆ.

**ಉಲ್ಲೇಖ:-** ಸಂಖ್ಯೆ:ಹೆಚ್.ಆರ್.ಸಿ.3264/ಎಸ್.ಎಂ-695/09, ದಿನಾಂಕ:02-07-2009.

* * * * *

ದಿನಾಂಕ:25/06/2009 ರಂದು ಡೆಕ್ಕನ್ ಹೆರಾಲ್ಡ್ ಮತ್ತು ಇಂಡಿಯನ್ ಎಕ್ಸ್‌ಪ್ರೆಸ್ ದಿನಪತ್ರಿಕೆಗಳಲ್ಲಿ ಸಚಿವರುಗಳು ಮತ್ತು ಅವರ ಆಪ್ತ ಸಿಬ್ಬಂದಿ ವರ್ಗದವರು ಹಾಗೂ ಸರ್ಕಾರದ ಹಿರಿಯ ಅಧಿಕಾರಿಗಳು ಸರ್ಕಾರಿ ವಾಹನಗಳನ್ನು ಕಛೇರಿ ಸಮಯದ ನಂತರವೂ ಉಪಯೋಗಿಸುತ್ತಿರುವ ಬಗ್ಗೆ ವರದಿಯಾಗಿರುವುದನ್ನು ಪರಿಗಣಿಸಿ ಈ ಬಗ್ಗೆ ವಿವರವಾದ ತನಿಖೆ ಮಾಡಿ 6 ವಾರದೊಳಗೆ ಆಯೋಗಕ್ಕೆ ವರದಿ ಸಲ್ಲಿಸುವಂತೆ ರಾಜ್ಯ ಮಾನವ ಹಕ್ಕುಗಳ ಆಯೋಗವು ಉಲ್ಲೇಖಿತ ಪತ್ರದಲ್ಲಿ ಕೋರಿರುತ್ತದೆ.

2. ಮೇಲ್ಕಂಡ ದಿನಪತ್ರಿಕಗಳಲ್ಲಿ ಪ್ರಕಟವಾಗಿರುವ ವಿಷಯವು ವಾಹನ ಚಾಲಕರ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಎಂ.ಎನ್. ವೇಣುಗೋಪಾಲ್ ಇವರು ಹೇಳಿಕೆ ನೀಡಿರುವುದು ಕಂಡು ಬರುತ್ತದೆ. ಈ ಹಿನ್ನೆಲೆಯಲ್ಲಿ ಎಲ್ಲಾ ಸಚಿವರುಗಳು ಹಾಗೂ ಸರ್ಕಾರದ ಎಲ್ಲಾ ಅಧಿಕಾರಿಗಳು ಮತ್ತು ನಿಗಮ ಮಂಡಳಿಗಳ ಅಧ್ಯಕ್ಷರು/ಮುಖ್ಯಸ್ಥರುಗಳು ಸರ್ಕಾರಿ ವಾಹನಗಳನ್ನು ಸರ್ಕಾರದ ಅಧಿಕೃತ ಕೆಲಸ-ಕಾರ್ಯಗಳಿಗೆ ಮಾತ್ರ ಉಪಯೋಗಿಸುವಂತೆ ಈ ಮೂಲಕ ಕಟ್ಟುನಿಟ್ಟಿನ ಸೂಚನೆಯನ್ನು ನೀಡಲಾಗಿದೆ.

ಸಹಿ/-
(ಎಸ್. ತಿಪ್ಪೇಸ್ವಾಮಿ),
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಆಸುಇ (ರಾಜ್ಯ ಶಿಷ್ಟಾಚಾರ)

**"ಪ್ರತಿ"**

ಸಂ./ಉತಇ/ತರಬೇತಿ/ಆಡಳಿತ-15/ವಿವ-05/09-10

ಉದ್ಯೋಗ ಮತ್ತು ತರಬೇತಿ ನಿರ್ದೇಶನಾಲಯ,
ಕೌಶಲ್ಯ ಭವನ, ಡೈರಿ ವೃತ್ತ,
ಬನ್ನೇರುಘಟ್ಟ ರಸ್ತೆ, ಬೆಂಗಳೂರು-29,
ದಿನಾಂಕ: 02-09-2009.

ಸರ್ಕಾರಿ ಸುತ್ತೋಲೆ ಸಂಖ್ಯೆ: ಸಿಆಸುಇ 150 ಶಿವಾನೀ 2009, ಬೆಂಗಳೂರು ದಿ:19-08-2009 ರ ಪ್ರತಿಯನ್ನು ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ.

ಸಹಾಯಕ ನಿರ್ದೇಶಕರು ,ಆಡಳಿತ,
ಉದ್ಯೋಗ ಮತ್ತು ತರಬೇತಿ.

ಗೆ,

1. ರಾಜ್ಯದಲ್ಲಿರುವ ಎಲ್ಲಾ 4 ವಿಭಾಗೀಯ ಕಛೇರಿಗಳಿಗೆ
2. ಉಪ ನಿರ್ದೇಶಕರು, ಉದ್ಯೋಗ ವಿಭಾಗ,
3. ಆಯುಕ್ತರ ಆಪ್ತ ಶಾಖೆ, ಜಂಟೀ ನಿರ್ದೇಶಕರ ಆಪ್ತಶಾಖೆ, ಜಂಟೀ ನಿರ್ದೇಶಕರು, ಪರೀಕ್ಷೆ ರವರ ಆಪ್ತ ಶಾಖೆ,
4. ಉಪ ನಿರ್ದೇಶಕರು, ನಿರ್ದೇಶನಾಲಯ,
5. ದರ್ಜೆ-1 ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳ ಪ್ರಾಚಾರ್ಯರುಗಳಿಗೆ ಸೂಕ್ತ ಕ್ರಮಕ್ಕಾಗಿ.
6. ಜಂಟೀ ನಿರ್ದೇಶಕರು (ತ). STARC., ಮಳವಳ್ಳಿ ಇವರ ಸೂಕ್ತ ಕ್ರಮಕ್ಕಾಗಿ 7. ಕಛೇರಿ ಪ್ರತಿ.